# ‘ಗೋಲ್ಡನ್ ಗನ್’ ಮೌನ

‘ಬೂಟುಗಳನ್ನು ಹಾಕಿಕೊಂಡೇ ಸಾಯಬೇಕು’ ಎನ್ನುವುದು ಆತನ ಆಸೆಯಾಗಿತ್ತು. ಹಾಗೆಯೇ ಆಯಿತು. ಆತ ನಟಿಸಬೇಕಾದ ಹೊಸ ಸಿನಿಮಾ ‘ದಿ ಲೆವೆನ್ತ್’ನ ಶೂಟಿಂಗ್ ಸಿದ್ಧತೆಗಳು ನಡೆದಿದ್ದವು. 93ನೇ ಹುಟ್ಟುಹಬ್ಬವನ್ನು ಆಚರಿಸಿ ಒಂದು ವಾರವಾಗಿತ್ತಷ್ಟೆ. ಕಳೆದ ವಾರ ಆಸ್ಪತ್ರೆಯಲ್ಲಿ ಆತ ತೀರಿಕೊಂಡ. ಆತನ ಹೆಸರು ಕ್ರಿಸ್ಟೋಫರ್ ಲೀ. ಹಾಲಿವುಡ್ ಸಿನಿಮಾಗಳನ್ನು ನೋಡುವವರಿಗೆ ಲೀ ಎಂದರೆ ಸಾಕು. ಉಳಿದವರಿಗೆ ಡ್ರಾಕುಲಾ ಪಾತ್ರಧಾರಿ ಎಂದರೆ ಬೇಗ ಗೊತ್ತಾಗುತ್ತದೆ. ತನ್ನ 30ರ ಹರೆಯದಲ್ಲಿ ಡ್ರಾಕುಲಾ ಪಾತ್ರಗಳಿಗೆ ಜೀವ ತುಂಬಿದ, ಆ ಬಳಿಕ ‘ಮಮ್ಮಿ’ಯಾಗಿ ಅವತರಿಸಿದ, 80ರ ಹರೆಯದಲ್ಲಿ ‘ಸ್ಟಾರ್‌ವಾರ್ಸ್’ ಕೌಂಟ್ ಡೂಕು ಆದ, ‘ದಿ ಲಾರ್ಡ್ ಆಫ್ ರಿಂಗ್ಸ್’ನಲ್ಲಿ ಕ್ರೂರ ಮಾಂತ್ರಿಕನಾದ, ಎಲ್ಲಕ್ಕಿಂತ ಮುಖ್ಯವಾಗಿ ಇಂಗ್ಲಿಷರ ‘ಜಿನ್ನಾ’ ಸಿನಿಮಾದಲ್ಲಿ ಸ್ವತಃ ಮೊಹಮ್ಮದಾಲಿ ಜಿನ್ನಾ ಕೂಡಾ ಬೆರಗಾಗುವಷ್ಟು ತಾದಾತ್ಮ್ಯದ ನಟನೆ ನೀಡಿದಾತ ಈ ಕ್ರಿಸ್ಟೋಫರ್ ಲೀ.

40ರ ದಶಕದಲ್ಲಿ ನಟನೆಗೆ ಇಳಿದಾಗ ಆರಂಭದಲ್ಲಿ ಈತನಿಗೆ ಸಿಕ್ಕಿದ್ದು ಸಣ್ಣ ಪುಟ್ಟ ಪಾತ್ರಗಳೇ. 1958ರಲ್ಲಿ ಬಂತು ಡ್ರಾಕುಲಾ ಸಿನಿಮಾ. ಟೈಮ್ಸ್ ಸ್ಕ್ವೇರ್‌ನಲ್ಲಿ 50 ಅಡಿ ಎತ್ತರದ ಭೂತ ಸಂಚರಿಸುವುದನ್ನು ನೋಡಿ ಹಾಲಿವುಡ್ ಪ್ರೇಕ್ಷಕರು ದಂಗಾದರು. ಆ ಕಾಲದಲ್ಲಿ 82,000 ಪೌಂಡ್ ಬಜೆಟ್‌ನಲ್ಲಿ ತಯಾರಾದ ಡ್ರಾಕುಲಾ, ಬರೋಬ್ಬರಿ 26 ದಶಲಕ್ಷ ಪೌಂಡ್ ಗಳಿಸಿ ದಾಖಲೆ ಬರೆಯಿತು. ಅಲ್ಲಿಂದಾಚೆಗೆ ಲೀ ಎಂದರೇ ಡ್ರಾಕುಲಾ! ಅಷ್ಟೇನೂ ಅಗಲವಲ್ಲದ ಕೋಲು ಮುಖ, ಬಾಯಿಯಿಂದ ಹೊರಗಿಣುಕುವ ಎರಡು ಕೋರೆ ಹಲ್ಲುಗಳು, ತೀಕ್ಷ್ಣ ನೋಟ, ವಿಲಕ್ಷಣ ಮುಖಭಾವ; ಗುಹೆಯಿಂದ ಹೊರಬಿದ್ದಂತಹ ಗಡಸುಧ್ವನಿ– ಕ್ರಿಸ್ಟೋಫರ್ ಲೀ, ವಿಲ್ಲನ್‌ಗೆ ಹೇಳಿ ಮಾಡಿಸಿದ ನಟನಾದ.

ಹಾಗೆ ನೋಡಿದರೆ ಈತ ನಟನಾಗಬೇಕೆಂದು ಬಯಸಿದವನಲ್ಲ. ಈತನ ತಂದೆ ಮೊದಲ ವಿಶ್ವಯುದ್ಧದಲ್ಲಿ ಭಾಗಿಯಾಗಿ ಕರ್ನಲ್ ಪದವಿಗೇರಿದ್ದ. ತಾಯಿ ಆ ಕಾಲದ ಹೆಸರಾಂತ ಸುಂದರಿ. 17ರ ಹರೆಯದಲ್ಲಿ ಶಾಲೆಗೆ ಶರಣು ಹೊಡೆದು ಸಣ್ಣ ಕಂಪೆನಿಯೊಂದರಲ್ಲಿ ಕ್ಲರ್ಕ್ ಆಗಿದ್ದ ಲೀ, 2ನೇ ವಿಶ್ವಯುದ್ಧದಲ್ಲಿ ಪಾಲ್ಗೊಂಡಿದ್ದೇ ಬದುಕು ಬೇರೆ ದಿಕ್ಕು ಹಿಡಿಯಿತು. ಸೈನ್ಯದಲ್ಲಿ ಬುದ್ಧಿವಂತ ಅಧಿಕಾರಿ ಎಂಬ ಹೆಸರು ಗಳಿಸಿದರೂ, ಪೈಲಟ್ ತರಬೇತಿಯಲ್ಲಿ ಪಾಸಾಗಲಿಲ್ಲ. ಅದೇ ಸಂದರ್ಭದಲ್ಲಿ ಇಟಾಲಿಯನ್ ಗೆಳೆಯನೊಬ್ಬ ಈತನನ್ನು ಸಿನಿಮಾ ಕಂಪೆನಿ ಸೇರಲು ಒತ್ತಾಯಿಸಿದ. ರ‍್ಯಾಂಕ್ ಎಂಟರ್‌ಟೈನ್‌ಮೆಂಟ್ ಎಂಬ ಕಂಪೆನಿಯ ಮುಖ್ಯಸ್ಥನ ಬಳಿಗೆ ಆತನೇ ಕರೆದೊಯ್ದ. 6 ಅಡಿ 4 ಇಂಚು ಎತ್ತರ ಈ ಲಂಬೂನನ್ನು ನೋಡಿ ಸಂದರ್ಶನ ಪಡೆದಾತ, ‘ಇಷ್ಟು ಎತ್ತರದ ಮನುಷ್ಯ ಎಲ್ಲಾದರೂ ನಟನಾಗುವುದು ಉಂಟೆ?’ ಎಂದು ಗೊಣಗಿದನಂತೆ.



ರೋಜರ್ ಮೂರ್ ನಾಯಕನಾಗಿದ್ದ ಜೇಮ್ಸ್ ಬಾಂಡ್ ಸಿನಿಮಾದಲ್ಲಿ (**The man with the golden gun**) ಚಿನ್ನದ ಗನ್ ಹಿಡಿದ ವಿಲ್ಲನ್ ಆಗಿ ನಟಿಸಿದಾಗ, ಲೀ ಪಡೆದದ್ದು 40,000 ಪೌಂಡ್ ಸಂಭಾವನೆ. ಅದಾಗಲೇ ಆತ ನಟ, ಗಾಯಕ ಮತ್ತು ಕಥೆಗಾರನಾಗಿ ಹೆಸರಾಗಿದ್ದ. ಜೇಮ್ಸ್ ಬಾಂಡ್ ಪತ್ತೇದಾರಿ ಕಾದಂಬರಿಗಳನ್ನು ಬರೆಯುತ್ತಿದ್ದ ಇಯಾನ್ ಫ್ಲೆಮಿಂಗ್ ಈತನ ಮಲಸೋದರನಾಗಿದ್ದ. ಯಶಸ್ಸಿನ ಏಣಿ ಹತ್ತಿದ ಬಳಿಕ, ಯಶಸ್ವೀ ಸಿನಿಮಾಗಳ ಮುಂದುವರಿದ ಭಾಗಗಳೇ ಬಂದವು. ಅದರಲ್ಲೆಲ್ಲ ಲೀ ಮುಖ್ಯ ವಿಲ್ಲನ್. ಅದರಲ್ಲೂ ಸೈತಾನನ ಪಾತ್ರವೆಂದರೆ ಇನ್ನೊಬ್ಬರ ಹೆಸರೇ ಬರುತ್ತಿರಲಿಲ್ಲ.

ಹರೆಯದಲ್ಲಿ ನೈಟ್ ಕ್ಲಬ್‌ನಲ್ಲಿ ಭೇಟಿಯಾದ ಹೆನ್ರೀಟ್ ವಾನ್ ರೋಸನ್‌ಗಳನ್ನು ಕೊನೆಗೂ ಲೀ ಮದುವೆಯಾಗಲು ಆಗಲಿಲ್ಲ. ಇಬ್ಬರ ನಿಶ್ಚಿತಾರ್ಥ ಆಗಿತ್ತು. ಆದರೆ ಆಕೆಯ ಅಪ್ಪ ಕೌಂಟ್ ಫ್ರಿಟ್ಜ್ ವಾನ್ ರೋಸನ್, ಮದುವೆಯನ್ನು ಒಂದು ವರ್ಷ ಮುಂದೂಡಲು ಕೋರಿದ. ಅದರ ಬೆನ್ನಲ್ಲೆ ಲಂಡನ್ನಿನಲ್ಲಿರುವ ತನ್ನ ಗೆಳೆಯರನ್ನು ಲೀ ಯ ಗುಣಸ್ವಭಾವಗಳನ್ನು ತಿಳಿಯುವ ಪತ್ತೇದಾರಿ ಕೆಲಸಕ್ಕೆ ಹಚ್ಚಿದ! ಅದೂ ಅಲ್ಲದೆ, ‘ನಿನ್ನ ಕೆಲವು ಗೆಳೆಯರ ಬಗ್ಗೆ ತಿಳಿಸು’ ಎಂದೂ ಲೀಯನ್ನೇ ಕೋರಿದ. ಮದುವೆಯಾಗಲಿರುವ ಹುಡುಗಿಯ ಅಪ್ಪ ಇಷ್ಟೆಲ್ಲ ತಪಾಸಣೆ ಮಾಡುವುದನ್ನು ಕಂಡು ಲೀಗೆ ಹೆದರಿಕೆಯೇ ಆಯಿತಂತೆ. ಕೊನೆಗೆ ಆತ ಮದುವೆಗೆ ಸ್ವೀಡನ್ನಿನ ದೊರೆಯ ಅನುಮತಿಯನ್ನೂ ಕೇಳಬೇಕಾಯಿತಂತೆ. ಇನ್ನೇನು ಮದುವೆಗೆ ಕೆಲವೇ ವಾರಗಳಿವೆ ಎನ್ನುವಾಗ ಲೀ, ನಿಶ್ಚಿತಾರ್ಥವನ್ನೇ ರದ್ದುಗೊಳಿಸಿದ. ಆ ಬಳಿಕ 40 ಹರೆಯದಲ್ಲಿ ಆ ಕಾಲದ ಹೆಸರಾಂತ ಡ್ಯಾನಿಶ್ ಮಾಡೆಲ್, ಬಿರ್ಗಿಟ್ ಕ್ರಾಂಕ್‌ಗಳನ್ನು ಮದುವೆಯಾದ. ದಶಕಗಳ ಕಾಲ ಸಂಸಾರ ಸುಖವಾಗಿ ಸಾಗಿತು. ಕಳೆದ ವರ್ಷ ಈ ಜೋಡಿ ‘ಅತ್ಯಂತ ಶಿಸ್ತಾಗಿ ಡ್ರೆಸ್ ಮಾಡಿದ ದಂಪತಿ’ ಎಂಬ ಪ್ರಶಸ್ತಿಯನ್ನೂ ಗಳಿಸಿತ್ತು.

ಈತನ ಮನೆಯಲ್ಲಿ ಭೂತಪ್ರೇತಗಳ ರಹಸ್ಯಜ್ಞಾನದ ಕುರಿತ 12 ಸಾವಿರಕ್ಕೂ ಹೆಚ್ಚು ಪುಸ್ತಕಗಳಿದ್ದವು ಎಂದೊಮ್ಮೆ ಸಂದರ್ಶನದಲ್ಲಿ ಪ್ರಕಟವಾಗಿತ್ತು. ಅದನ್ನೇ ಉಲ್ಲೇಖಿಸಿ ಯುವಜನರಿಗೆ ಈತ ಇನ್ನೊಮ್ಮೆ ಸಂದೇಶವೊಂದನ್ನೂ ನೀಡಿದ್ದ– ‘ದಯವಿಟ್ಟು ನೀವ್ಯಾರೂ ಹೀಗೆ ರಹಸ್ಯಜ್ಞಾನದ ಬೆನ್ನು ಹತ್ತಬೇಡಿ. ಅದು ಜೀವನದಲ್ಲಿ ನಿಮ್ಮನ್ನು ಎಲ್ಲಿಗೂ ಕೊಂಡೊಯ್ಯುವುದಿಲ್ಲ!’ ಫ್ರೆಂಚ್, ಜರ್ಮನ್, ಸ್ಪಾನಿಶ್ ಮತ್ತ ಇಟಾಲಿಯನ್ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುತ್ತಿದ್ದ ಲೀ, ಸ್ವೀಡಿಶ್, ಗ್ರೀಕ್ ಮತ್ತು ರಶ್ಯನ್ ಭಾಷೆಯನ್ನೂ ತಿಳಿದಿದ್ದ. ಹಲವು ಸಿನಿಮಾಗಳಿಗೆ ಧ್ವನಿದಾನ ಮಾಡಿದ್ದೂ ದೊಡ್ಡ ಸಾಧನೆ. ಕುಟುಂಬ ಜೀವನದ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿದ್ದ ಲೀ ಬ್ರಿಟನ್ನಿನ ಕನ್ಸರ್ವೇಟಿವ್ ಪಕ್ಷದ ದೊಡ್ಡ ಬೆಂಬಲಿಗ. ವೃತ್ತಿಜೀವನದಲ್ಲಿ ದೊಡ್ಡ ಸಾಧನೆ ಮಾಡಿದರೂ, ಈತನ ಸಾವನ್ನು ದೊಡ್ಡ ಸುದ್ದಿಯಾಗಲು ಕುಟುಂಬದವರು ಬಿಡಲಿಲ್ಲ. ಆಸ್ಪತ್ರೆಯಲ್ಲಿ ನಿಧನ ಹೊಂದಿದ ಸುದ್ದಿಯನ್ನು ಮೊದಲು ಕುಟುಂಬದ ಎಲ್ಲ ಸದಸ್ಯರಿಗೂ ತಿಳಿಸಿ, ಅಂತಿಮದರ್ಶನವಾದ ಬಳಿಕವೇ ಮಾಧ್ಯಮಗಳಿಗೆ ಸುದ್ದಿ ತಿಳಿಸಲಾಯಿತು. ಅಷ್ಟರಮಟ್ಟಿಗೆ ಲೀ ‘ಕನ್ಸರ್ವೇಟಿವ್’ ನಿಲುವು ಸಾವಿನಲ್ಲೂ ವ್ಯಕ್ತಗೊಂಡಿತು. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65